# ಹ್ಯಾಪೀ ನ್ಯೂ ಇಯರ್

ಜನವರಿ ಒಂದನೇ ದಿನ ಇಬ್ಬರು ವಯಸ್ಕರು ಬ್ಯಾಂಕಿನಲ್ಲಿ ಸಂಧಿಸಿದರು. ಅವರಿಬ್ಬರ ನಡುವೆ ಮಾತುಕತೆ ಹೀಗಿತ್ತು. ಒಬ್ಬರೆಂದರು : "ನಮಸ್ಕಾರ ಸ್ವಾಮಿ, ಹ್ಯಾಪಿ ನ್ಯೂ ಇಯರ್" ಅದಕ್ಕುತ್ತರವಾಗಿ ಇನ್ನೊಬ್ಬರು ಹ್ಯಾಪಿ ನ್ಯೂ ಇಯರ್ ಎಂದು ಹೇಳುತ್ತಾ ಕೈಕುಲುಕಿದರು. ಇವರಲ್ಲಿ ಒಬ್ಬರು ತನ್ನ ಹಣೆಯ ಮೇಲೆ ಮೇಲ್ನಾಮ ಎಳೆದುಕೊಂಡು ಪಂಚೆಯುಟ್ಟು ಸಂಪ್ರದಾಯಸ್ತರಂತೆ ಕಂಡರೆ, ಇನ್ನೊಬ್ಬ ವ್ಯಕ್ತಿ ಅಡ್ಡನಾಮ ಎಳೆದಿದ್ದರು. ಆದರೆ ಇವರಿಬ್ಬರಲ್ಲಿ ನಡೆದ ಸಂಭಾಷಣೆ ಮಾತ್ರ ವಿಶಿಷ್ಟವಾಗಿತ್ತು. ಹೇಗೆಂದರೆ ಇಬ್ಬರೂ ಭಾರತೀಯರೇ, ಭಾರತೀಯ ಭಾಷೆಯನ್ನು ಮಾತನಾಡುವರೇ. ಆದರೆ ಇಬ್ಬರೂ ಸಂಧಿಸಿದಾಗ ಶುಭಾಶಯ ಕೋರಿದ್ದು ಇಂಗ್ಲಿಷ್ ಹೊಸ ವರ್ಷಕ್ಕಾಗಿ, ಮಾತನಾಡಿದ್ದು ಇಂಗ್ಲಿಷ್ ಭಾಷೆಯಲ್ಲಿ ಹಾಗೂ ಕೈಕುಲುಕಿದ್ದು ಇಂಗ್ಲಿಷ್ ಶೈಲಿಯಲ್ಲಿ, ವಿಶೇಷವೆಂದರೆ ಇವರಿಬ್ಬರಿಗೂ 'ಹ್ಯಾಪಿ ನ್ಯೂ ಇಯರ್' ಎಂದು ಹೇಳುವುದಕ್ಕೆ ಆನಂದವಾಗಿತ್ತು.

ಮೇಲಿನ ಘಟನೆ ಒಂದು ಉದಾಹರಣೆ. ಜನವರಿ ಒಂದನೇ ದಿನ ಬಂದಿತೆಂದರೆ, ಈ ರೀತಿ 'ಹ್ಯಾಪಿ..... ಕೋರುವುದು ಸರ್ವಸಾಮಾನ್ಯ. ಇದು ಭಾರತ ದೇಶಾದಾದ್ಯಂತ ಅದರಲ್ಲೂ ವಿಶೇಷವಾಗಿ ನಗರಪ್ರದೇಶಗಳಲ್ಲಿ ಕಾಣುವ ಸಾಮಾನ್ಯ ದೃಶ್ಯ. ಈ ಪದ್ಧತಿಗೆ ರಾಷ್ಟ್ರಾಧ್ಯಕ್ಷರಾಗಲೀ, ಪ್ರಧಾನಮಂತ್ರಿಯಾಗಲೀ ವಿರೋಧ ಪಕ್ಷದ ನಾಯಕರಾಗಲಿ ಅಥವಾ ಇನ್ಯಾವುದೇ ಜಾತಿಯ ಪಂಥದ ಜನರೂ ಹೊರತಾಗಿಲ್ಲ. ಈ ಬಾರಿ ಜನವರಿ ೧೯೯೯ಳರನ್ನು ಸ್ವಾಗತಿಸಲು ರಾತ್ರಿಯೆಲ್ಲಾ ಭಾರತೀಯ (ಸರ್ಕಾರಿ ಹಿಡಿತದ) ದೂರದರ್ಶನವು ವಿಶೇಷ ಕಾರ್ಯಕ್ರಮಗಳನ್ನು ಬಿತ್ತರಿಸಿತ್ತು.ಪಾಶ್ಚಾತ್ತ್ಯರ ರಾಕ್, ಪಾಪ್ ಡಿಸ್ಕೋ ಮುಂತಾದವುಗಳನ್ನು ಸಮೃದ್ಧವಾಗಿ ದೂರದರ್ಶನದಲ್ಲಿ ಅಂದು ರಾತ್ರಿ ಕಾಣುವಂತಾಯಿತು. ದೇಶದ ಪ್ರಸಿದ್ಧ ಸಿನಿಮಾ ತಾರೆಯರು, ಕಲಾವಿದರು ಅಂದು ಹೊಸ 'ಕ್ಯಾಲೆಂಡರ'ನ್ನು ಸ್ವಾಗತಿಸಿದರು. ಮಾರನೆಯ ದಿವಸ ಬೆಳಿಗ್ಗೆ ತಾವೇನೋ ಹೊಸ ಸಾಧನೆಯನ್ನು ಮಾಡುತ್ತಿರುವಂತೆ, ಅನೇಕರು ಎಲ್ಲರಿಗೂ ಶುಭ ಕೋರುವುದನ್ನೇ ಒಂದು ಉದ್ಯೋಗ ಮಾಡಿಕೊಂಡಿದ್ದರು. ಆದರೆ 'ಜನೆವರಿ ಒಂದು'ಕ್ಯಾಲೆಂಡರಿನ ಬದಲಾವಣೆಯ ದಿನ ಮಾತ್ರ ಎಂದು ಭಾರತೀಯರನೇಕರಿಗೆ ಹೊಳೆಯಲಿಲ್ಲವೇಕೆ?. ಹಾಗಾದರೆ ಜನೆವರಿ ಒಂದನ್ನು ಹೊಸ ವರ್ಷವೆಂದು ಆಚರಿಸುವುದು ತಪ್ಪೇ? ಎಂಬ ಪ್ರಶ್ನೆ ಏಳುತ್ತದೆ. ಇದು ತಪ್ಪಲ್ಲ, ಆದರೆ ಇದನ್ನು ಅಂಧಾನುಕರಣೆ ಹಾಗೂ ಶಿಕ್ಷಣದ ಕೊರತೆ ಎಂದು ಹೇಳಬಹುದು. ಏಕೆಂದರೆ ಈ ವಿಷಯದಲ್ಲಿ ನಮ್ಮತನವನ್ನೇ ನಾವು ಬಿಟ್ಟಿದ್ದೇವೆ. ನಮ್ಮ ದೇಶದ ಧರ್ಮ ಸಂಸ್ಕೃತಿಗಳೇನು? ನಮ್ಮ ಆಚಾರ ವಿಚಾರಗಳು ಎಂತಹವು? ಒಂದು ಕಾಲದಲ್ಲಿ ವಿಶ್ವವಂದ್ಯವಾಗಿದ್ದ ನಮ್ಮ ಸಂಸ್ಕೃತಿಯು ಎಂತಹ ಶ್ರೇಷ್ಠತಮವಾದದ್ದು. ಇವೆಲ್ಲವುದರ ಬಗ್ಗೆ ನಾವು ತಲೆಯನ್ನೇ ಕೆಡಿಸಿಕೊಂಡಿಲ್ಲ. ಬದಲಾಗಿ ಪಾಶ್ಚಾತ್ಯರ ಹಿಂದೆ ಹುಚ್ಚರಂತೆ ಓಡುತ್ತಿದ್ದೇವೆ. ಸ್ವಾತಂತ್ರ್ಯಾನಂತರ ಅಧಿಕಾರ ವಹಿಸಿಕೊಂಡು ರಾಜ್ಯಭಾರ ಮಾಡುವ ಕಾತುರದಲ್ಲಿ ನಮ್ಮ ಅಂದಿನ ರಾಷ್ಟ್ರೀಯ ನಾಯಕರು ಇವುಗಳನ್ನೆಲ್ಲಾ ಕಡೆಗಾಣಿಸಿದರು. ಆದ್ದರಿಂದ ಸಹಜವಾಗಿಯೇ ನಮ್ಮ ದೇಶದ ಏಕತೆ ಪಾಶ್ಚಾತ್ಯರನ್ನು ಅನುಕರಣೆ ಮಾಡುವಂತಾಯಿತು.

ಹಾಗಾದರೆ ಭಾರತೀಯ ಸಂಸ್ಕೃತೀಯ ಪ್ರಕಾರ ಹೊಸ ವರ್ಷ ಯಾವುದು? ಪ್ರತಿವರ್ಷವೂ ಹಿಂದುಗಳು ಆಚರಿಸುವ ಯುಗಾದಿ ಹಬ್ಬವೇ ಈ ಶುಭ ದಿನ. ಅತಿ ವೈಜ್ಞಾನಿಕವಾಗಿ ಆಚರಿಸುವ ಯುಗಾದಿ ಹಬ್ಬವು ಹಿಂದು ಪಂಚಾಂಗದ ಪ್ರಕಾರ ಹೊಸ ವರ್ಷದ ಆರಂಭದ ದಿನ. ಗಿಡಮರಗಳಲ್ಲಿ ಹೊಸ ಚಿಗುರು ಹೊಸ ಚೈತನ್ಯ, ಪ್ರಾಣಿಪಕ್ಷಿಗಳಲ್ಲಿ ಹೊಸ ಹುರುಪು ಉತ್ಸಾಹ ತುಂಬುವ ವಸಂತ ಋತುವಿನ ಮೊದಲ ದಿನದಂದು ಯುಗಾದಿ ಹಬ್ಬವನ್ನು ಆಚರಿಸಲಾಗುತ್ತದೆ. ಜೀವನದಲ್ಲಿ ಸುಖ ದು:ಖಗಳು ಸಮಾನವಾಗಿ ಬರುತ್ತವೆ. ಮನುಷ್ಯನು ಕೇವಲ ಸುಖಕ್ಕಾಗಿಯೇ ಕಾಯದೇ ಸುಖದು:ಖಗಳನ್ನು ಸಮಾನವಾಗಿ ಕಾಣುವಂತೆ ಜನರನ್ನು

ಪ್ರೇರೇಪಿಸಲು, ಯುಗಾದಿ ಹಬ್ಬದಂದು ಹಿಂದುಗಳಲ್ಲಿ ಬೇವು-ಬೆಲ್ಲ ಸೇವಿಸುವ ಪದ್ದತಿ ಇದೆ. ಈ ರೀತಿಯ ದು:ಖವನ್ನೂ ಆಹ್ವಾನಿಸುವ ಪದ್ಧತಿಯು ಬಹುಶ: ಪ್ರಪಂಚದೆಲ್ಲೆಲ್ಲೂ ಕಾಣಲು ಸಾಧ್ಯವಿಲ್ಲ. ಯುಗಾದಿಯಂದು ಸೇವಿಸುವ ಕಹಿಯಾದ ಬೇವಿನ ವಿಶೇಷತೆಯನ್ನು ಕೆಳಗಿನ ಶ್ಲೋಕ ವಿವರಿಸುತ್ತದೆ.

ಶತಾಯುರ್ವಜ್ರದೇಹಸ್ಯ ಸರ್ವ ಸಂಪತ್ಕರಾಯಚ ।
ಸರ್ವಾರಿಷ್ಟವಿನಾಶಾಯ ನಿಂಬಕಂ ದಳಭಕ್ಷಣಂ ॥

"ಬೇವನ್ನು ಸೇವಿಸುವುದರಿಂದ ಸರ್ವ ರೋಗರುಜಿನಗಳು ನಾಶವಾಗಿ ನೂರು ವರ್ಷಗಳ ಕಾಲ ವಜ್ರದಂತೆ ಗಟ್ಟಿಮುಟ್ಟಾದ ದೇಹವನ್ನು ಹೊಂದಿ ಸುಖ, ಶಾಂತಿ ಹಾಗೂ ಸರ್ವ ಸಂಪತ್ತಿನಿಂದ ಜೀವಿಸಬಹುದು" ಎಂದು ಹೇಳುತ್ತದೆ. ಇಂತಹ ವಿಶಾಲ ಅರ್ಥವನ್ನು ಹೊಂದಿರುವ ಹಿಂದು ಹೊಸ ವರ್ಷಾಚರಣೆಯನ್ನು ನಾವು ಕಡೆಗಾಣಿಸಿ, ಆಂಗ್ಲ ಹೊಸ ವರ್ಷಕ್ಕೆ ಮನ್ನಣೆ ನೀಡುತ್ತಿರುವುದು ದುರದೃಷ್ಟಕರ.ಕೇವಲ ಹೊಸ ವರ್ಷಾಚರಣೆಯೊಂದರಲ್ಲೇ ನಾವು ಪರಕೀಯರನ್ನು ಅನುಸರಿಸುತ್ತಿಲ್ಲ. ನಮ್ಮ ಜೀವನದ ವಿವಿಧ ಸ್ತರಗಳಲ್ಲೂ ನಾವು ಆಂಗ್ಲರನ್ನು ಅನುಸರಿಸುತ್ತಿದ್ದೇವೆ. ಈಗ ಗಮನಿಸಿ-ಭಾರತದ ರಾಷ್ಟ್ರೀಯ ಕ್ರೀಡೆ ಯಾವುದು? ಎಂದಾಗ ಹಾಕಿ,ಕಬಡ್ಡಿ,ಖೋಖೋ ಮುಂತಾದ ಉತ್ತರಗಳು ಬರುತ್ತವೆ. ಆದರೆ ನಮ್ಮ ರಾಷ್ಟ್ರೀಯ ಭಾರತಲ್ಲಿಂದು ಅತಿ ಜನಪ್ರಿಯ ಕ್ರೀಡೆ ಕ್ರಿಕೆಟ್ ಎಂಬುದು ನಿರ್ವಿವಾದ. ಹಾಗಾದರೆ ನಮ್ಮ ರಾಷ್ಟ್ರೀಯ ಕ್ರೀಡೆ ಕ್ರಿಕೆಟ್ ಎಂದಾಯಿತು. ಅದೂ ಇಂಗ್ಲೆಂಡ್ ನಲ್ಲಿ ಉದಿಸಿದ ಒಂದು ಕ್ರೀಡೆ.

ಇನ್ನು ನಮ್ಮ ದೇಶವು ಪ್ರಪಂಚದ ಬೇರಾವ ದೇಶದಲ್ಲೂ ಇಲ್ಲದಂತ ಭಾಷಾ ಸಮೃದ್ಧಿಯನ್ನು ಹೊಂದಿದೆ. ಆದರೆ ನಮ್ಮ ರಾಜ್ಯಾಂಗ, ಆಡಳಿತದಲ್ಲಿ ಅತಿ ಹೆಚ್ಚು ಬಳಸುವ ಭಾಷೆ-ಇಂಗ್ಲಿಷ್.ಭಾರತದಲ್ಲಿ ಹಿಂದಿ ರಾಷ್ಟ್ರೀಯ ಭಾಷೆಯಾಗಿದ್ದರೂ ಇಂಗ್ಲಿಷಿಗೇ ಇಲ್ಲಿ ಹೆಚ್ಚು ಪ್ರಾಮುಖ್ಯ.
"ಬ್ರಿಟನ್ನಿನ ದಾಶ್ಯದಿಂದ ಬಿಡುಗಡೆ ಹೊಂದಿದ ರಾಷ್ಟ್ರಗಳೆಲ್ಲವೂ ತಂತಮ್ಮ ದೇಶೀಯ ಭಾಷೆಗಳನ್ನೇ ಸ್ವೀಕರಿಸಿವೆ. ಬರ್ಮಾ ದೇಶ ಬರ್ಮೀ ಭಾಷೆಯನ್ನು, ಸಿಂಹಳವು ಸಿಂಹಳ ಭಾಷೆಯನ್ನು ಸ್ವೀಕರಿಸಿವೆ. ಅವರ ಕೈಗೆ ಅಧಿಕಾರ ಬರುತ್ತಿದ್ದಂತೆಯೇ ತಂತಮ್ಮ ಭಾಷೆಗಳಿಗೆ ಬದಲಾಸಿಕೊಂಡರು.ಅಫ್ರಿಕ ದೇಶವು ನಮಗಿಂತಲೂ ಹಿಂದಿದ್ದರೂ (ವೈಜ್ಞಾನಿಕ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ)ಅವರು ತಮ್ಮ ಭಾಷೆಯನ್ನೇ ರಾಷ್ಟ್ರಭಾಷೆಯೆನ್ನಾಗಿ ಮಾಡಿ ಚೆನ್ನಾಗಿಯೇ ಕಾರ್ಯಭಾರ ನಿರ್ವಹಿಸುತಿದ್ದಾರೆ. ಆದರೆ ನಮ್ಮಲ್ಲಿ ಅನೇಕ ಸಮೃದ್ಧ ಭಾಷೆಗಳಿದ್ದರೂ ನಾವು ನಿರ್ಜೀವ ಧೋರಣೆಯನ್ನು ಹೊಂದಿದ್ದೇವೆ. ಬ್ರಿಟಿಷರಿದ್ದಾಗಲೂ ಇಂಗ್ಲಿಷ ಇತ್ತು. ಈಗಲೂ ಇಂಗ್ಲಿಷ್ ಇದೆ. ಇನ್ನು ಜನಮನದಲ್ಲಿ ದೇಶಭಕ್ತಿಯನ್ನು ಎಚ್ಚರಿಸುವುದು ಹೇಗೆ?" ಎಂದು ೧೯೭೩ ರಲ್ಲಿ ಪ.ಪೂ.ಗುರೂಜಿ ಬೆಂಗಳೂರಿಗೆ ಬಂದಿದ್ದಾಗ ಹೇಳಿದ ಮಾತುಗಳು ಇಂದೂ ಅಕ್ಷ:ರಸ ಸತ್ಯವಾಗಿದೆ. ನಾವು ಧರಿಸುವ ಉಡುಪಾದರೂ ಭಾರತೀಯವೋ? ನಗರ ಪ್ರದೇಶಗಳ ಮಟ್ಟಿಗಂತೂ ಖಂಡಿತ ಅಲ್ಲ. ಇಲ್ಲೂ ನಾವು ಇಂಗ್ಲಿಷರನ್ನೇ ಅನುಸರಿಸುತ್ತಿದ್ದೇವೆ.
ಇವೆಲ್ಲಾ ಹೋಗಲಿ ದೇಶದ ಜನತೆ ಚುನಾವಣೆಯಲ್ಲಿ ಆಯ್ಕೆ ಮಾಡಿದ ಜನಜಾ ಪ್ರತಿನಿಧಿಗಳು ದಿಲ್ಲಿಯಲ್ಲಿ ಕೂಡುವ ಸಂಸದೀಯ ಕಟ್ಟಡ ಆದರೂ ನಮ್ಮದೇ? ಅಲ್ಲ. ಏಕೆಂದರೆ ಇದನ್ನು ಬ್ರಿಟಿಷರ ಆಳ್ವಿಕೆಯಲ್ಲಿ ಕಟ್ಟಿಸಿದ್ದು. ಅದನ್ನು ನಾವು ಇಲ್ಲಿಯವರೆಗೂ ಉಳಿಸಿಕೊಡು ಬಂದದ್ದೇ ಅಲ್ಲದೇ 'ಸಂಸತ್ ಭವನ' ವನ್ನಾಗಿಅದನ್ನು ಸ್ವೀಕರಿಸಿದ್ದೇವೆ. ಹಾಗೆಯೇ ನಮ್ಮ ರಾಷ್ಟ್ರಪತಿ ಭವನವನ್ನೂ ಬ್ರಿಟಿಷರೇ ಕಟ್ಟಿಸಿದ್ದು. ಪ್ರಧಾನಮಂತ್ರಿಗಳು ಪ್ರತಿ ವರ್ಷವೂ ನಿಂತು ಜನತೆಗೆ ಆಶ್ವಾಸನೆಗಳ ಮಹಾಪೂರವನ್ನೇ ಹರಿಸುವ ಕೆಂಪು ಕೋಟೆ ಕಟ್ಟಡ ಹಾಗೂ ಅನೇಕ ಪ್ರಮುಖ ಕಟ್ಟಡಗಳು ಭಾರತೀಯರು ಕಟ್ಟಿಸಿದುವುಗಳೇ ಅಲ್ಲ. ಇವೆಲ್ಲವೂ ಪರಕೀಯರ ಸ್ಮಾರಕಗಳು. ಇವುಗಳನ್ನು ಕಿತ್ತೊಗೆಯಬಾರದೇಕೆ? ಕನಿಷ್ಟ ಪಕ್ಷ ಅವುಗಳನ್ನು ಸಂಸತ್

ಭವನಗಳನ್ನಾಗಿ ಮಾರ್ಪಡಿಸುವುದನ್ನಾದರೂ ನಿಲ್ಲಿಸಬೇಕು. ಇವೆಲ್ಲಾ ಕಂಡ ಮೇಲೆ ನಾವು ನಮ್ಮ ದೇಶವನ್ನು ಭಾರತ ಎನ್ನಬೇಕೋ? ಅಥವಾ ಇಂಗ್ಲೆಂಡ್ ಎನ್ನಬೇಕೋ ಎಂಬ ಅನುಮಾನ ಮೂಡುವುದು ಸಹಜ.

ನಮ್ಮದೂ ಒಂದು ಸ್ವತಂತ್ರ ರಾಷ್ಟ್ರ. ನಾವೂ ಸ್ವಾಭಿಮಾನಿಗಳು, ನಮ್ಮ ಧರ್ಮ ಸಂಸ್ಕೃತಿಗಳು ಪ್ರಪಂಚಕ್ಕೇ ಮಾದರಿಯಾಗಬಲ್ಲವು ಎಂಬ ಅರಿವು ನಮ್ಮಲ್ಲಿ ಕಿಂಚಿತ್ತಾದರೂ ಇದ್ದರೆ, ಅದನ್ನು ನಾವು ಹೊಸ ವರ್ಷದ ಆಚರಣೆಯಿಂದಲೇ ವಿಶ್ವಕ್ಕೆ ತೋರಿಸೋಣ.ಹೊಸ ವರ್ಷದ ಹೆಸರಿನಲ್ಲಿ ಹುಚ್ಚು ಕಿಣಿತ,ಕುಡಿತ, ಮೋಜಿನ ಕಾಲ ಕಳೆಯುವುದಕ್ಕೆ ನಾವು ತಿಲಾಂಜಲಿ ನೀಡಿ ಪರಿಶುದ್ಧವಾದ ಯುಗಾದಿಯನ್ನು ಹೊಸ ವರ್ಷದ ಆರಂಭ ದಿನವೆಂದು ಆಚರಿಸೋಣ. ಈ ಯುಗಾದಿಯ ಸರಿಯಾದ ಆಚರಣೆಯಿಂದಲೇ ನಮ್ಮ ಸ್ವಾತಂತ್ರವನ್ನು ಸ್ವಾಭಿಮಾನವನ್ನು ವಿಶ್ವಕ್ಕೆ ಪ್ರದರ್ಶಿಸೋಣ.

Jan 31st 1994 Hosa Diganta Happy New Year